ಓ.ಎಸ್. ನಂಃ **179/2010**
ಡಿ.ಡಬ್ಲ್ಯೂಃ **1**

ದಿನಾಂಕ **15-11-2024** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿಯ ಪರ: ಶ್ರೀ. ಎಂ.ಕೆ.ವಿ.ಎ ವಕೀಲರಿಂದಃ

22 ಪಹಣಿ ಪತ್ರಿಕೆಗಳನ್ನು ಕ್ರಮವಾಗಿ ನಿಡಿ-27 ರಿಂದ 48, ದಿನಾಂಕ 05.10.2021 ರ ಯಾದಗಿರಿ ತಹಸಿಲ್ದಾರ ರವರ ಹಿಂಬರಹವನ್ನು ನಿಡಿ-49, ಅಣ್ಣಪ್ಪ ರವರ ಸೇವಾ ಪುಸ್ತಕದ ದೃಡೀಕೃತ ಪ್ರತಿಯನ್ನು ನಿಡಿ-50, ದಿನಾಂಕ 28.01.1973 ರ ಯಾದಗಿರಿ ತಾಲೂಕ ಅಭಿವೃದ್ದಿ ಮಂಡಲದ ಅದೇಶ ದೃಡೀಕೃತ ಪ್ರತಿಯನ್ನು ನಿಡಿ-51, ದಿನಾಂಕ 14.10.1964 ರ ಯಾದಗಿರಿ ತಹಸಿಲ್ದಾರ ರವರ ಆದೇಶದ ಪ್ರತಿಯನ್ನು ನಿಡಿ-52 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್.ಹೆಚ್.ಜಿ.ಜಿ ವಕೀಲರಿಂದಃ

ನನ್ನ ತಂದೆ ಹೊನ್ನಪ್ಪ ನನ್ನ ತಾತನ ಹಿರಿಯ ಮಗ ಆಗಿದ್ದರು ಎಂದರೆ ಸರಿ. ರಾಮಣ್ಣ, ಲಕ್ಷ್ಮಪ್ಪ ಹಾಗೂ ಎಸ್. ಹನುಮಂತ ರವರು ನನ್ನ ತಂದೆಯ ತಮ್ಮಂದಿರು ಆಗಿರುತ್ತಾರೆ ಎಂದರೆ ಸರಿ. ನನ್ನ ಅಜ್ಜ ಮಲ್ಲಪ್ಪನ ತಂದೆಯ ಹೆಸರು ಸ್ಕ್ರೆಪ್ಪ ಎಂದು ಇರುತ್ತದೆ. ಸದರಿ ನನ್ನ ಮತ್ತಜ್ಜ ಸಕ್ರಪ್ಪ ರವರನ್ನು ನಾನು ಅಥವಾ 1 ನೇ ಪ್ರತಿವಾದಿ ಕಣ್ಣಾರೆ ನೋಡಿಲ್ಲ ಎಂದರೆ ಸರಿ. ನಿಮ್ಮ ಮುತ್ತಜ್ಜ ಅವರ ಮಗ ಮಲ್ಲಪ್ಪ ಹಾಗೂ ಮೊಮ್ಮಕ್ಕಳಾದ ಹೊನ್ನಪ್ಪ, ರಾಮಣ್ಣ, ಲಕ್ಷ್ಮಣ್ಣ ಹಾಗೂ ಹನುಮಂತ ರವರೊಂದಿಗೆ ಜಂಟಿ ಕುಟುಂಬದಲ್ಲಿ ಹಿರಿಯ ಸದಸ್ಯನಾಗಿ ಜೀವನ ಸಾಗಿಸಿದ ಬಗ್ಗೆ ನಿಮಗೆ ಗೊತ್ತಿದೆಯೇ ಎಂದರೆ ಸಾಕ್ಷಿಯು ನಾನು ನನ್ನ ಮುತ್ತಜ್ಜನನ್ನು ನೋಡಿಲ್ಲ ಹಾಗಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ನನ್ನ ಮುತ್ತಜ್ಜ ಸಕ್ರಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಿಮ್ಮ ಮುತ್ತಜ್ಜ ಸಕ್ರಪ್ಪನ ತಂದೆಯ ಹೆಸರು ಹೊನ್ನಪ್ಪ ಎಂದು ಇದ್ದು ಹಾಗೂ ಸದರಿ ಹೊನ್ನಪ್ಪ

ಮರಣಹೊಂದಿದ ನಂತರ ನಿಮ್ಮ ತಂದೆ ಹೊನ್ನಪ್ಪ ಜನಿಸಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆಗ ನನ್ನ ಮುತ್ತಜ್ಜ ತನ್ನ ತಂದೆಯ ನೆನಪಿನ ಕಾಣಿಕೆಯಾಗಿ ನನ್ನ ತಂದೆಗೆ ಹೊನ್ನಪ್ಪ ಎಂದು ನಾಮಕರಣ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ ನನ್ನ ಮುತ್ತಜ್ಜ ನನ್ನ ತಂದೆಯ ವಿಶೇಷ ಪ್ರೀತಿ ಹೊಂದಿದ್ದು, ದಾವಾ ಜಮೀನನ್ನು ದೇವರಾವ್ ತಂದೆ ನಾರಾಯಣರಾವ್ ಎಂಬುವವರಿಂದ ನನ್ನ ತಂದೆಯ ಹೆಸರಿನಲ್ಲಿ ಖರೀದಿ ಪತ್ರ ಮಾಡಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ದಾವಾ ಆಸ್ತಿಯನ್ನು ನನ್ನ ತಂದೆ ಸ್ವತಃ ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. ಖರೀದಿ ಪತ್ರ ಯಾರ ಹೆಸರಿಗೆ ಆಗುತ್ತದೆ ಅವರ ಹೆಸರಿಗೆ ಮಾತ್ರ ಪಹಣಿ ಬರುತ್ತದೆ ಎಂದರೆ ಸಾಕ್ಷಿಯು ಖರೀದಿದಾರರು ಸ್ವತಃ ಖರೀದಿ ಮಾಡುತ್ತಾರೆ ಆ ಪ್ರಕಾರ ಅವರ ಹೆಸರಿಗೆ ಪಹಣಿ ಬರುತ್ತದೆ ಎಂದು ನುಡಿಯುತ್ತಾರೆ. ಪಹಣಿಯಲ್ಲಿ ನನ್ನ ತಂದೆ ಹೆಸರು ನಮೂದು ಇದ್ದ ವಿಷಯದ ದುರುಪಯೋಗ ಪಡಿಸಿಕೊಂಡು ದಾವಾ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆಂದರೆ ಸರಿಯಲ್ಲ.

3. ನಾವು ನಿಡಿ-22 ರ ಖರೀದಿ ಪತ್ರದ ದೃಡೀಕೃತ ನಕಲು ಹಾಜರು ಮಾಡಿದ್ದೇವೆ ಎಂದರೆ ಸರಿ. ಸದರಿ ಖರೀದಿ ಪತ್ರ ಉರ್ದು ಭಾಷೆಯಲ್ಲಿ ಇರುವುದರಿಂದ ಅದರ ಇಂಗ್ಲೀಷ್ ಅನುವಾದ ಪತ್ರವನ್ನು ನಿಡಿ-22(ಎ) ಎಂದು ಗುರುತಿಸಿಕೊಂಡಿದ್ದೇವೆ ಎಂದರೆ ಸರಿ. ಅನುವಾದ ಮಾಡಿದ ವಕೀಲರ ಪ್ರಮಾಣ ಪತ್ರವನ್ನು ನಿಡಿ-22(ಬಿ) ಎಂದು ಗುರುತಿಸಿಕೊಂಡಿದ್ದೇವೆ ಎಂದರೆ ಸರಿ. ನಿಡಿ-22(ಎ)ರ ಅನುವಾದ ಪತ್ರದಲ್ಲಿ ಕೊನೆಯಲ್ಲಿ ದಿನಾಂಕ 10 ಬಹೆಮನ್ 1359 ಫಸಲಿ ಎಂದು ನಮೂದು ಇದೆ ಎಂದರೆ ಸಾಕ್ಷಿಯು ವರ್ಷ 1939 ಆಗುವ ಬದಲು 1359 ಎಂದು ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ. ನಿಡಿ-22(ಬಿ) ಪ್ರಮಾಣ ಪತ್ರದಲ್ಲಿಯೂ ಸಹ ದಿನಾಂಕ 10 ಬಹೆಮನ್ 1359 ಫಸಲಿ ಎಂದು ನಮೂದು ಇದೆ ಎಂದರೆ ಸಾಕ್ಷಿಯು ವರ್ಷ ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಬೆರಳಚ್ಚು ತಪ್ಪಿನಿಂದ ಆಗಿರಬಹುದು ಎಂದು ನುಡಿಯುತ್ತಾರೆ.

4. ನಿಡಿ-22 ರ ಖರೀದಿ ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಅಥವಾ ಅದರ ಪೂರ್ವದಲ್ಲಿ ನನ್ನ ತಂದೆ ಪಟವಾರಿ (ಗ್ರಾಮ ಲೆಕ್ಕಾಧಿಕಾರಿ) ಆಗಿರಲಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರದ ಸಮಯದಲ್ಲಿ ನಿಮ್ಮ ತಂದೆ ಅವರ ತಂದೆ, ಅಜ್ಜ ಹಾಗೂ ಸಹೋದರರೊಂದಿಗೆ ಜಂಟಿ ಕುಟುಂಬದ ಸದಸ್ಯನಾಗಿ ಕೇವಲ ಒಕ್ಕಲುತನ ಮಾತ್ರ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನನ್ನ ತಂದೆ ಆಗ ಪಟವಾರಿ ಆಗಿದ್ದರು ಎಂದು ನುಡಿಯುತ್ತಾರೆ. ಖರೀದಿ ಪತ್ರದ ಸಮಯದಲ್ಲಿ ದೇವರಾವ್ ತಂದೆ ನಾರಾಯಣರಾವ್ ರವರು ಗಣಪೂರ ಗ್ರಾಮದ ಪಟವಾರಿ ಆಗಿದ್ದರು ಎಂದರೆ ಸಾಕ್ಷಿಯು ಸರಿದ ದೇವರಾವ್ ರವರಿಗೆ ಆರೋಗ್ಯ ಸರಿ ಇಲ್ಲದ ಕಾರಣ ನನ್ನ ತಂದೆಗೆ ಪಟವಾರಿ ಜವಬ್ದಾರಿ ವಹಿಸಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಆ ರೀತಿ ನನ್ನ ತಂದೆಗೆ ಜವಬ್ದಾರಿ ನೀಡಿದ್ದರು ಎಂದು ನಿಡಿ-22 ರ ಖರೀದಿ ಪತ್ರದಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಡಿ-22 ಹಾಗೂ 22(ಎ) ಖರೀದಿ ಪತ್ರದಲ್ಲಿ ದೇವರಾವ್ ತಂದೆ ನಾರಾಯಣರಾವ್ ರವರ ಉದ್ಯೋಗ ಪಟವಾರ್ ಗೇರಿ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಆತ ಪಟವಾರ್ ಆಗಿದ್ದರಿಂದ ವೃತ್ತಿ ಆ ರೀತಿ ನಮೂದಿಸಲಾಗಿದೆ ಎಂದು ನುಡಿಯುತ್ತಾರೆ.

(ನ್ಯಾಯಾಲಯದ ಕಲಾಪದ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಗಿದೆ.)

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ